I/308984/2022

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/14/ಸಿಡಿಸಿ(2)/2022

ಆಯುಕ್ತರವರ ಕಛೇರಿ
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ
ಬೆಂಗಳೂರು-560001, ದಿನಾಂಕ:05/09/2022

## ಸುತ್ತೋಲೆ

**ವಿಷಯ**:- ಐಐಎಸ್‌ಸಿ, ಬೆಂಗಳೂರು ಇವರು ಸರ್ಕಾರಿ /ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗಣಕ ಯಂತ್ರ ವಿಭಾಗದ ಉಪನ್ಯಾಸಕರುಗಳಿಗೆ "ಸೈಬರ್ ಸೆಕ್ಯುರಿಟಿ" ವಿಷಯದ ಬಗ್ಗೆ ನಡೆಸುವ ತರಬೇತಿಗೆ ಉಪನ್ಯಾಸಕರನ್ನು ನಿಯೋಜಿಸುವ ಕುರಿತು.

**ಉಲ್ಲೇಖ**:- ಐಐಎಸ್‌ಸಿ, ಬೆಂಗಳೂರು ಇವರ ಇ-ಮೇಲ್ ಪತ್ರ, ದಿನಾಂಕ: 10/08/2022.

-0-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಐಐಎಸ್‌ಸಿ, , ಬೆಂಗಳೂರು ಇವರು ದಿನಾಂಕ: 10-10-2022 ರಿಂದ 15-10-2022 ವರೆಗೆ "ಸೈಬರ್ ಸೆಕ್ಯುರಿಟಿ" ಎಂಬ ವಿಷಯದ ಬಗ್ಗೆ ಒಂದು ವಾರದ ತರಬೇತಿಯನ್ನು ಸಿ-20 ಪಠ್ಯಕ್ರಮಕ್ಕೆ ಅನುಸಾರವಾಗಿ ಗಣಕಯಂತ್ರ ವಿಭಾಗದ ಉಪನ್ಯಾಸಕರುಗಳಿಗೆ ಹಮ್ಮಿಕೊಂಡಿರುತ್ತಾರೆ. ಆದುದರಿಂದ ಸೈಬರ್ ಸೆಕ್ಯುರಿಟಿ ವಿಷಯವನ್ನು ಬೋಧಿಸುವ ಗಣಕಯಂತ್ರ ವಿಭಾಗದಿಂದ ಒಬ್ಬ ಉಪನ್ಯಾಸಕರ ಹೆಸರನ್ನು ಸಂಸ್ಥೆಗಳ ಪ್ರಾಂಶುಪಾಲರುಗಳು ಗೂಗಲ್ ಫಾರ್ಮ್ ಮುಖಾಂತರ ದಿನಾಂಕ 08-09-2022 ರೊಳಗೆ ತಪ್ಪದೇ ಕಳುಹಿಸಲು ತಿಳಿಸಲಾಗಿದೆ.

ಸದರಿ ತರಬೇತಿಗೆ ಹಾಜರಾಗುವ ಉಪನ್ಯಾಸಕರುಗಳಿಗೆ ಐಐಎಸ್‌ಸಿ(IISC),ಬೆಂಗಳೂರು ಕ್ಯಾಂಪಸ್ ನಲ್ಲಿ ಉಚಿತ ವಸತಿ ವ್ಯವಸ್ಥೆ ಮಾತ್ರವಿದ್ದು, ಪ್ರಯಾಣ ಭತ್ಯೆ / ದಿನಭತ್ಯೆ ನೀಡಲಾಗುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

**ಜಂಟಿ ನಿರ್ದೇಶಕರು(ಸಿಡಿಸಿ)**

ಇವರಿಗೆ:

1. ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರು ಮತ್ತು ಬೋಧಕ ವರ್ಗದವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗಕ್ಕೆ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.